**<u>ದಿನಾಂಕಃ 05-02-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .</u>**

**<u>ಪಾಟೀ ಸವಾಲು: 2 ರಿಂದ 17 ನೇ ಪ್ರತಿವಾದಿಗಳ ಪರ ಶ್ರೀ.ಎನ್.ವಿ.ಸಿ.ವಕೀಲರಿಂದಃ</u>**

ನಾನು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ನಾಗತಿಹಳ್ಳಿಯ ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕನೆಂದು ಸೇವೆ ಸಲ್ಲಿಸುತ್ತಿದ್ದೇನೆ . ಕಳೆದ 1 ತಿಂಗಳಿನಿಂದ ಮುಖ್ಯ ಶಿಕ್ಷಕನೆಂದು ಸೇವೆ ಸಲ್ಲಿಸುತ್ತಿದ್ದೇನೆ . ಅದಕ್ಕಿಂತ ಪೂರ್ವದಲ್ಲಿ ನಾನು ಶಿಕಾರಿಪುರದಲ್ಲಿ ನಾಲ್ಕು ವರ್ಷದವರೆಗೆ ಸೇವೆ ಸಲ್ಲಿಸಿದ್ದೇನೆ. ನಾನು ಬೆಸಾಯ ಮಾಡುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಈಗ ಬಸಪ್ಪ , ಶಿವಪ್ಪ , ಮರಿಶಿದ್ದಪ್ಪ ರವರ ಮಕ್ಕಳು ಹಾಗು ಸಿದ್ದಬಸಪ್ಪ ರವರ ಮಕ್ಕಳ ಹೆಸರಿನಲ್ಲಿ ಇವೆ. ಸದರಿ ದಾವಾ ಸ್ವತ್ತುಗಳು ವಾರಸಾ ನಾಥೆಯಿಂದ ಸದರಿಯವರ ಹೆಸರಿಗೆ ಬಂದಿರುತ್ತವೆ. ದಾವಾ ಪತ್ರದೊಂದಿಗೆ ಸಲ್ಲಿಸಿರುವ ಷಡ್ಯೂಲ್ -ಕ ದಲ್ಲಿ ನಮೂದಿಸಿರುವ ವ್ಯಕ್ತಿಗಳ ಹೆಸರುಗಳ ಮುಂದೆ ಸದರಿ ವ್ಯಕ್ತಿಗಳು ದಾವೆಯಲ್ಲಿ ವಾದಿಗಳು ಆಗಿದ್ದಾರಾ ಅಥವಾ ಪ್ರತಿವಾದಿಗಳಾಗಿದ್ದಾರಾ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ದಾವಾ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನಾನೇ ನೀಡಿದ್ದೇನೆ.

ಹಲಗೇರಿ ಗ್ರಾಮದ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಬರುವ ಮನೆ ಮತ್ತು ಖಣದ ಸಂಖ್ಯೆಗಳನ್ನು ಹೇಳಲು ಬರುತ್ತದಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕೆಲವೊಂದು ಸ್ವತ್ತುಗಳ ಸಂಖ್ಯೆಯನ್ನು ಮಾತ್ರ ತನಗೆ ಹೇಳಲು ಬರುತ್ತದೆ ಎಂದು ನುಡಿಯುತ್ತಾರೆ . ವಿ.ಪಿ.ಸಿ.ನಂ.196 ರಲ್ಲಿ ಮನೆ ಇದೆ. ಹಲಗೇರಿ ಗ್ರಾಮ ಪಂಚಾಯಿತಿಯ ವಿ.ಪಿ.ಸಿ.ನಂ.196/2 ರಲ್ಲಿ ಇರುವ ಮನೆಯ ವಿಸ್ತೀರ್ಣ ನನಗೆ ಹೇಳಲು ಬರುತ್ತದೆ ಅದು 85 ಅಡಿ ಉದ್ದ ಮತ್ತು 40 ಅಡಿ ಅಗಲ ಆಗಿರುತ್ತದೆ. ವಿ.ಪಿ.ಸಿ.ನಂ.170/1, ವಿ.ಪಿ.ಸಿ. ನಂ.170/2, ವಿ.ಪಿ.ಸಿ.ನಂ.170/3 ಮತ್ತು ವಿ.ಪಿ.ಸಿ.ನಂ.170/4 ರಲ್ಲಿ ಆಸ್ತಿಗಳು ಇವೆ . ಈ ದಾವೆಯಲ್ಲಿ ನಾನು ಹಲಗೇರಿ ಗ್ರಾಮದ ಬಯಲು ಜಾಗೆ ಮತ್ತು ಖಣಕ್ಕೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿದ್ದೇನೆ ಆದರೆ ಅವುಗಳ ಸಂಖ್ಯೆ ನನಗೆ ಈಗ ನೆನಪಿಗೆ ಬರುತ್ತಿಲ್ಲ. ಸದರಿ ಹಲಗೇರಿ ಗ್ರಾಮದ ವಿ.ಪಿ.ಸಿ. ಆಸ್ತಿಗಳ ವಿಸ್ತೀರ್ಣ ನನಗೆ ಈಗ ನೆನಪಿಗೆ ಬರುತ್ತಿಲ್ಲ. ಹಲಗೇರಿ ಗ್ರಾಮದ ವಿ.ಪಿ.ಸಿ. ನಂ.176/2 ರಲ್ಲಿ ಇರುವ ಮನೆಯ ಚೆಕ್ಕುಬಂದಿಗಳು ನನಗೆ ಹೇಳಲು ಬರುತ್ತದೆ ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಮಾಳಗಿ ರವರ ಖಣ ಮತ್ತು ಮನೆ ಇದೆ , ಪೂರ್ವಕ್ಕೆ ಬಸಪ್ಪ ಮುದ್ದಪ್ಪಳವರ ರವರ ಮನೆ ಮತ್ತು ಗರಡಿ ಮನೆ ಇದೆ , ಪಶ್ಚಿಮಕ್ಕೆ ಶಿದ್ದಬಸಪ್ಪ

ಮುದ್ದಪ್ಪಳವರ ರವರ ಮನೆ ಇದೆ.

ಹಲಗೇರಿ ಗ್ರಾಮದ ವಿ.ಪಿ.ಸಿ. ನಂ.176/3 ರಲ್ಲಿ ಇರುವ ಮನೆಯ ಚೆಕ್ಕುಬಂದಿಗಳು ನನಗೆ ಹೇಳಲು ಬರುತ್ತದೆ ಪೂರ್ವಕ್ಕೆ ಶಿವಪ್ಪ ಮುದ್ದಪ್ಪಳವರ ರವರ ಮನೆ ಇದೆ , ಪಶ್ಚಿಮಕ್ಕೆ ಮರಿಶಿದ್ದಪ್ಪ ಮುದ್ದಪ್ಪಳವರ ರವರ ಮನೆ ಇದೆ , ಉತ್ತರಕ್ಕೆ ರಸ್ತೆ ಇದೆ, ದಕ್ಷಿಣಕ್ಕೆ ಮಾಳಗಿ ರವರ ಖಣ ಇದೆ .

ಹಲಗೇರಿ ಗ್ರಾಮದ ವಿ.ಪಿ.ಸಿ. ನಂ.176/4 ರಲ್ಲಿ ಇರುವ ಮನೆಯ ಚೆಕ್ಕುಬಂದಿಗಳು ನನಗೆ ಹೇಳಲು ಬರುತ್ತದೆ ಪೂರ್ವಕ್ಕೆ ಶಿದ್ದಬಸಪ್ಪ ಮುದ್ದಪ್ಪಳವರ ರವರ ಮನೆ ಇದೆ, ಪಶ್ಚಿಮಕ್ಕೆ ಮಾಳಗಿ ರವರ ಮನೆ ಇದೆ, ಉತ್ತರಕ್ಕೆ ರಸ್ತೆ ಇದೆ, ದಕ್ಷಿಣಕ್ಕೆ ಮಾಳಗಿ ರವರ ಆಸ್ತಿ ಇದೆ .

ಹಲಗೇರಿ ಗ್ರಾಮದ ವಿ.ಪಿ.ಸಿ ಆಸ್ತಿಗಳ ಸಂಖ್ಯೆ , ಅವುಗಳ ಕ್ಷೇತ್ರ ಮತ್ತು ಚೆಕ್ಕುಬಂದಿಗಳು ನನಗೆ ಈಗ ನೆನಪಿಗೆ ಬರುತ್ತಿಲ್ಲ . ಹಲಗೇರಿ ಗ್ರಾಮದ ವಿ.ಪಿ.ಸಿ. ನಂ.795/3 ರ ಆಸ್ತಿ ಈ ದಾವೆಯ 12 ನೇ ಪ್ರತಿವಾದಿ ಸೋಮಪ್ಪ ತಂದೆ ಮರಿಶಿದ್ದಪ್ಪ ಮುದ್ದಪ್ಪಳವರ ಮತ್ತು 14 ನೇ ಪ್ರತಿವಾದಿ ಮಹಾದೇವಪ್ಪ ತಂದೆ ಮರಿಶಿದ್ದಪ್ಪ ಮುದ್ದಪ್ಪಳವರ ರವರ

ಹೆಸರಿನಲ್ಲಿ ಇವೆ ಎಂದರೆ ಸರಿ. ಹಲಗೇರಿ ಗ್ರಾಮದ ವಿ.ಪಿ.ಸಿ. ನಂ.795/2 ರ ಆಸ್ತಿ ಈಗ ಸ್ಧ್ಯಕ್ಕೆ ನಂದಾ ಮತ್ತು ರಮೇಶ ಹಾಗು ಉಮೇಶ (16 ಮತ್ತು 17 ನೇ ಪ್ರತಿವಾದಿಗಳು) ರವರ ಹೆಂಡತಿಯರ ಹೆಸರಿನಲ್ಲಿ ಇವೆ. ಸದರಿ ವಿ.ಪಿ.ಸಿ. ನಂ.795/2 ರ ಆಸ್ತಿಗಳು ಈಗ 7 ನೇ ಪ್ರತಿವಾದಿ ರಮೇಶ, 8 ನೇ ಪ್ರತಿವಾದಿ ಉಮೇಶ ಮತ್ತು 5 ನೇ ಪ್ರತಿವಾದಿ ವಸಂತವ್ವಳ ಗಂಡ ಮಹೇಶಪ್ಪ ರವರ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ. ಹಲಗೇರಿ ಗ್ರಾಮದ ವಿ.ಪಿ.ಸಿ. ನಂ.197/ಅ/2 ರ ಆಸ್ತಿ ಈ ದಾವೆಯ 16 ನೇ ಪ್ರತಿವಾದಿ ನಂದಾ ಕೋಂ ಉಮೇಶ ಮತ್ತು 17 ನೇ ಪ್ರತಿವಾದಿ ನೇತ್ರಾ ಕೋಂ ರಮೇಶ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಹಲಗೇರಿ ಗ್ರಾಮದ ವಿ.ಪಿ.ಸಿ. ನಂ.197 ರ ಆಸ್ತಿ ಮೂಲ ಪುರುಷ ಬಸಪ್ಪ ಮುದ್ದಪ್ಪಳವರ ರವರ ಹೆಸರಿನಲ್ಲಿ ಇದೆ. ಸದರಿ ವಿ.ಪಿ.ಸಿ. ನಂ.197 ರ ಆಸ್ತಿ ಈಗ ಈ ದಾವೆಯ 2 ನೇ ಪ್ರತಿವಾದಿ ಮಳಶಾಂತಪ್ಪ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾ ಸ್ವತ್ತು ವಿ.ಪಿ.ಸಿ. ನಂ.197/ಕ ರ ಆಸ್ತಿ ಈಗ ಸ್ಧ್ಯಕ್ಕೆ ಯಾರ ಹೆಸರಿನಲ್ಲಿ ಇದೆ ಎನ್ನುವುದು ನನಗೆ ಈಗ ನೆನಪಿಗೆ ಬರುತ್ತಿಲ್ಲ. ದಾವಾ ಸ್ವತ್ತು ವಿ.ಪಿ.ಸಿ. ನಂ.197/ಬ ರ ಆಸ್ತಿ ಈಗ ಸ್ಧ್ಯಕ್ಕೆ ಯಾರ ಹೆಸರಿನಲ್ಲಿ ಇದೆ

ಎನ್ನುವುದು ನನಗೆ ಈಗ ನೆನಪಿಗೆ ಬರುತ್ತಿಲ್ಲ. ಸದರಿ ಮೇಲೆ ಹೇಳಿದ ಆಸ್ತಿಗಳು 2008 ರಲ್ಲಿ ಠರಾವು ನಂ.6/11 ರ ಪ್ರಕಾರ ಸದರಿ ಮೇಲೆ ಹೇಳಿದ ಪ್ರತಿವಾದಿಗಳ ಹೆಸರಿನಲ್ಲಿ ಖಾತೆ ಆಗಿವೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.